ಕ್ರಿಸ್ತು ಜಯಂತಿ ಕನ್ನಡ ಸಂಶೋಧನಾ ಪತ್ರಿಕೆ
(Kristu Jayanti Kannada Sanshodhana Patrike)
ಸಂಪುಟ 1, ಸಂಚಿಕೆ 1, ಮಾರ್ಚ್ 2022, ಪುಟಗಳು 61–73

# ವಚನಗಳಲ್ಲಿ ಶಿವಯೋಗಾಂಗಗಳು ಒಂದು ವಿವೇಚನೆ

**ಡಾ ಭಾಗ್ಯಮ್ಮ. ಜಿ**
*ಸಹಾಯಕ ಪ್ರಾಧ್ಯಾಪಕರು*
*ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ, ಬೆಂಗಳೂರು*
Email: bhagya.sneha@gmail.com

"ವಚನವೆಂದರೆ ಮಾತು. ಮನಂಬುಗುವ ಮಾತು. ಜಿಜ್ಞಾಸುವಿನ ಸಮಸ್ಯೆಗಳನ್ನು ಬಗೆಹರಿಸಬಲ್ಲ ನಲ್ನುಡಿ. ವಚನಗಳನ್ನು ಓದುವಾಗ ಅಥವಾ ಕೇಳುವಾಗ ತನಗಿರದ ತನಗಾಗದ ಅನುಭವವಾಗುತ್ತದೆ. ಶರಣವಾಣಿಯಲ್ಲಿ ಆ ಸತ್ವವಿರುತ್ತದೆ. ಆ ಸವಿಯಿರುತ್ತದೆ. ಅದರಲ್ಲಿ ಒಂದು ಬಗೆಯ ಆಕರ್ಷಣ ಚೇತನವಿರುತ್ತದೆ. ಸತ್ಯಸಾಕ್ಷಾತ್ಕಾರದ ಧ್ವನಿಯೇ ವಚನ. ವಚನವು ಸ್ವಯಾನುಭವ ರಸಾನುಬಂದಿ"[1] ವಚನಗಳು ಜೀವನದ ಶೋಧನೆ. ಭಾವದ ಆವಿಷ್ಕಾರ. ವಚನಗಳು ಸ್ವಾನುಭಾವದ ಪ್ರತಿಭೆಯಿಂದ ಪಡಿಮೂಡಿವೆ. ಉನ್ನತ ಭಾವಶೃಂಗದಲ್ಲಿ ಸಂಚರಿಸುತ್ತವೆ. ಪ್ರತಿಯೊಬ್ಬ ಯೋಗ ಸಾಧಕರ ಸತ್ಯಾನ್ವೇಷಣೆಯ, ಹೃನ್ಮನದ ಚೆಲ್ನುಡಿಗಳೇ ವಚನಗಳು.

ವಚನ ಸಾಹಿತ್ಯದಲ್ಲಿ ವಚನಕಾರರ ಯೋಗತತ್ವವು ಒಟ್ಟಾರೆಯಾಗಿ ಯೋಗಜೀವನದಲ್ಲಿ ಸಾಧಕರ ವ್ಯಕ್ತಿತ್ವದ ಸಮಗ್ರ ತಿಳುವಳಿಕೆಯನ್ನು ಪ್ರಸ್ತುತಪಡಿಸುತ್ತದೆ. ಯೋಗ ಸಾಧನೆಗೆ ವಚನಗಳಲ್ಲಿನ ಯೋಗತಂತ್ರದ ತತ್ವಜ್ಞಾನದ ಮಾರ್ಗದರ್ಶನ ಅವಶ್ಯಕ. ಈ ಜಾಗತೀಕರಣ ಸಮಾಜದಲ್ಲಿ ಯೋಗದ ಅಭ್ಯಾಸಿಗಳ ದೃಷ್ಟಿಕೋನ ವಿಶಾಲಗೊಳಿಸಿದರೆ ವಚನಕಾರರ ಯೌಗಿಕ ನೆಲೆಯನ್ನು ಅರ್ಥಸಿಕೊಳ್ಳಲು ಸಾಧ್ಯ.

**'ಯೋಗ'** ಎಂಬ ಶಬ್ದವು 'ಯುಜ್' ಎನ್ನುವ ಸಂಸ್ಕೃತ ಧಾತುವಿನಿಂದ ಬಂದಿದೆ. 'ಯಜ್' ಎಂದರೆ 'ಕೂಡಿಸು' 'ಬಂಧಿಸು', 'ಸಂಯೋಜಿಸು' ಎಂದರ್ಥ. ವಚವ ಸಾಹಿತ್ಯದಲ್ಲಿ ಕೂಡಿಸು ಬಂಧಿಸು ಸಂಯೋಜಿಸು ಪರಿಕಲ್ಪನೆಗಳು ಅಷ್ಟಾವರಣ, ಪಂಚಾಚಾರ, ಕಾಯಕ ದಾಸೋಹ, ಷಟ್ ಸ್ಥಲ, ಶಿವಯೋಗ, ಅನುಸಂಧಾನ, ಭಕ್ತಿಕಾಯದ ನೆಲೆಗಳಲ್ಲಿ ವ್ಯಕ್ತವಾಗಿದೆ. ಮನುಷ್ಯ ತನ್ನ ದೇಹಾತ್ಮವನ್ನು, ದಿವ್ಯಾತ್ಮನಲ್ಲಿ ಐಕ್ಯಗೊಳಿಸುವ ಸಾಧನೆಯೇ ಯೋಗ. ಶಿವಯೋಗ ಪದವು ಸತ್, ಚಿತ್, ಆನಂದ, ನಿತ್ಯ, ಪರಿಪೂರ್ಣ ಮತ್ತು ಅಖಂಡವೆಂಬ ಆರು ಲಕ್ಷಣದಂತೆ ಅಖಂಡಾನಂದ ಸ್ವರೂಪದಿಂದ ಕೂಡಿದೆ. ಈ ಸತ್–ಚಿತ್–ಆನಂದಗಳೇ ಸತ್ಕ್ರಿಯೆ, ಸುಜ್ಞಾನ, ಸದ್ಭಾವಗಳನ್ನು ನಿರ್ಮಿಸುತ್ತವೆ. ಈ ಸತ್ಕ್ರಿಯೆ, ಸುಜ್ಞಾನ, ಸದ್ಭಾವಗಳು ದೇಹ–ಮನ–ಜೀವಗಳಲ್ಲಿರುವ ಮಾಯಾಶಕ್ತಿಯ ಸಂತಾನಗಳಾದ ದುಷ್ಟಕ್ರಿಯೆ, ದುಷ್ಟವಿಚಾರ, ದು:ಖ

ಭಾವಗಳನ್ನು ನಿವಾರಣೆ ಮಾಡುತ್ತಾ ಸಾಗುತ್ತವೆ. ಈ ಮಾಯಾಸಂತಾನಗಳನ್ನು ತಾತ್ವಿಕ ಭಾಷೆಯಲ್ಲಿ ಆಣವ, ಮಾಯಾ, ಕಾರ್ಮಿಕ ಮಲಗಳೆಂದು ಕರೆಯುತ್ತಾರೆ. ಈ ಮಲಗಳ ನಿವಾರಣೆಯಾದರೆ, ದೇಹ–ಮನ–ಜೀವಗಳು ಅಂಗಗಳೆಂದೆನಿಸಿ ತ್ಯಾಗಾಂಗ, ಭೋಗಾಂಗ, ಯೋಗಾಂಗಗಳೆಂದೆನಿಸುವುವು. ಈ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ ವೆಂದನಿಸುವುವು. ಈ ಮೂರು ಲಿಂಗಗಳು ಮೂರು ಅಂಗಗಳೊಂದಿಗೆ ಸಮನ್ವಯಗೊಳ್ಳುತ್ತಾ ಅಂತಿಮವಾಗಿ ಸಮರಸಗೊಳ್ಳುತ್ತವೆ. ಇದಕ್ಕೆ ಲಿಂಗವಂತರ ತಾತ್ವಿಕ ಭಾಷೆಯಲ್ಲಿ ಲಿಂಗಾಂಗ ಯೋಗವೆನ್ನುತ್ತಾರೆ. ಧಾರ್ಮಿಕ ಪರಿಭಾಷೆಯಲ್ಲಿ ಶಿವಯೋಗ ವೆನ್ನುತ್ತಾರೆ.

ಲಿಂಗದ ಕಲ್ಪನೆಯು ಯೋಗದ ಸಾಧನೆಯಲ್ಲಿ ಕ್ರಿಯಾಶೀಲವಾದ ಪರಿಪೂರ್ಣತೆಯನ್ನು ನಿರೂಪಿಸುವುದು. "ಸೈಂಧವ ಲಿಂಗವು ಲಿ–ಅಡಗು ಮತ್ತು ಗಮ್–ಹೊರ ಹೊಮ್ಮು ಈ ಎರಡು ಕ್ರಿಯೆಗಳಿಂದ ರಚಿತವಾಗಿದೆ. ಇದರಿಂದ ಸೃಷ್ಟಿಯಲ್ಲಿಯ ಚರಾಚರ ವಸ್ತುಗಳು ಯಾವುದರಿಂದ ತೋರಿ, ಯಾವುದರಲ್ಲಿ ಅಡಗುವವೊ ಆ ಪರವಸ್ತುವೆ 'ಲಿಂಗ' ಎಂಬ ಅರ್ಥ ನಿಷ್ಪತ್ತಿಯಾಗುತ್ತದೆ. ಮತ್ತು ಲಿಂಗ ಪದದ ಅರ್ಥವು 'ಸ್ಥಲ' ಪದದಿಂದ ವ್ಯಕ್ತವಾಗುವ ಅರ್ಥಕ್ಕೆ ತುಂಬಾ ಹೊಂದಿಕೆಯಾಗುತ್ತದೆ."[2]

ಮನುಷ್ಯರ ಭೌತಿಕ ಶರೀರವು ರಕ್ತಮಾಂಸಾದಿಗಳಿಂದ ನಿರ್ಮಿತವಾಗಿದ್ದು ಅದು ಲೌಕಿಕ ಜೀವನವನ್ನು ನಡೆಸುವುದಕ್ಕೆ ಸಹಕಾರಿಯಾಗಿದೆ. ಇಂತಹ ಭವದ ದೇಹವನ್ನು ಗುರು ಕಾರುಣ್ಯದ ಮುಖೇನ ಮಂತ್ರದೀಕ್ಷೆಯಿಂದ ದೈವೀಕರಿಸಿ ಭವಿಯನ್ನು ಭಕ್ತನಾಗಿಸುವನು. ಆಗ ಲಿಂಗದ ನೆನಹೇ ಸಾಧಕನ ಮನದಲ್ಲಿ ನೆಲೆಸುವ ಕಾರಣ ವಾಯುಪ್ರಾಣಿಯಾಗದೆ ಲಿಂಗಪ್ರಾಣಿಯೆಂದು ಕರೆಯಲ್ಪಡುವನು. ಸಾಧಕನು ಯೋಗ ಸಾಧನೆಯನ್ನು ವಿಶ್ವಾಸದಿಂದ ಮಾಡಿದರೆ ಯೋಗಿಯ ಮನವು ಪರಮನ ವಾಸಸ್ಥಾನವಾಗುವುದು. ಇಂಥ ಒಂದು ಅದ್ಭುತ ರಹಸ್ಯವನ್ನು ವಚನಕಾರರು ಹನ್ನೆರಡನೆಯ ಶತಮಾನದಲ್ಲಿಯೇ ಕಂಡುಕೊಂಡು ಹೊತ್ತು ಹೊರಡುವ ಮುನ್ನವೇ ಇಷ್ಟಲಿಂಗದ ಮುಖಾಂತರ ತ್ರಾಟಕಯೋಗವನ್ನು ಮಾಡಿ ಆರೋಗ್ಯವನ್ನು ಆಯುಷ್ಯವನ್ನೂ ವೃದ್ಧಿಮಾಡಿಕೊಳ್ಳುವ ಬಗೆಯನ್ನು ವಚನಗಳ ಮೂಲಕ ಜಗತ್ತಿಗೆ ಸಾರಿದರು.

**ಅಂಗ**

ಅಂಗ ಪದವು ಮೂಲತಃ ಸಂಸ್ಕೃತದ್ದು. ಸಾಮಾನ್ಯರ್ಥ: ಒಡಲು, ದೇಹ, ಶರೀರ. ವಿಶೇಷಾರ್ಥ: ಶಿವಜ್ಞಾನಿಯಾದ ಜೀವಿ. ಅಂಗಕ್ಕೆ ಸಂವಾದಿ ಪದಗಳು: ಶರೀರ, ದೇಹ, ಕಾಯ, ತನು, ಮೈ, ಒಡಲು, ಘಟ. ಅಂಗ ಎಂದರೆ ಸಾಮಾನ್ಯವಾಗಿ ದೇಹ ಅಥವಾ ಶರೀರ ಎಂಬುದು ಬಾಹ್ಯ ಅರ್ಥ. ಕಾಯ ಎಂಬ ಪರ್ಯಾಯ ಪದವನ್ನು ಅಂಗಕ್ಕೆ ವಚನಕಾರರು ಕೊಟ್ಟಿದ್ದಾರೆ. ಅಂಗ ಪದವನ್ನು ದಾರ್ಶನಿಕ ಅರ್ಥದಲ್ಲಿ

ಕ್ರಿಸ್ತು ಜಯಂತಿ ಕನ್ನಡ ಸಂಶೋಧನಾ ಪತ್ರಿಕೆ
(Kristu Jayanti Kannada Sanshodhana Patrike)
ಸಂಪುಟ 1, ಸಂಚಿಕೆ 1, ಮಾರ್ಚ್ 2022, ಪುಟಗಳು 61–73

ಬಳಸಿರುವುದು ವಿಶೇಷವಾಗಿದೆ. ಇಷ್ಟಲಿಂಗವನ್ನು ಗುರುವು ದೀಕ್ಷೆಯ ಮೂಲಕ ಶಿಷ್ಯನ ಅಂಗದ ಮೇಲೆ ಸ್ಥಾಪಿಸುತ್ತಾನೆಂದು ಹೇಳಲಾಗುತ್ತದೆಯೇ ಹೊರತು, ಶಿಷ್ಯನ ಕಾಯದ ಮೇಲೆ, ಶರೀರದ ಮೇಲೆ, ದೇಹದ ಮೇಲೆ ಸ್ಥಾಪಿಸುತ್ತಾನೆಂದು ಹೇಳುವುದಿಲ್ಲ, ದೇಹ, ಶರೀರ ಇವು ಲಿಂಗದೀಕ್ಷೆಗಿಂತ ಮೊದಲು ಇದ್ದಂಥವು. ಲಿಂಗ ಸಂಸ್ಕಾರವಾದ ಮೇಲೆ ಅವು ಅಂಗವೆನಿಸುತ್ತವೆ. ಇದು ದಾರ್ಶನಿಕ ಪರಿಭಾಷೆಯಲ್ಲಿ ಬಳಸಲ್ಪಡುವ ಪದ. ಅಂಗಕ್ಕೆ ಲಿಂಗವ ಕೊಟ್ಟವ ಆಚಾರ್ಯನಾದ ಎಂಬ ಶರಣರ ನುಡಿಯಂತೆ ಇಷ್ಟಲಿಂಗವನ್ನು ಅಂಗದ ಮೇಲೆ ಯಾವಾಗಲೂ ಧರಿಸಿಕೊಂಡಿರಬೇಕು. ದೇಹವು ಮಲ, ಮೂತ್ರ, ಮಾಂಸ ಮಜ್ಜೆಯ, ಪಿಚ್ಚು, ಸಿಂಬಳ, ಬೆವರು,, ಸಗಣಿಗಳಂತಹ ಹೊಲಸುಗಳಿಂದ ತುಂಬಿರುತ್ತದೆ. ಆದ್ದರಿಂದ ಲಿಂಗವನ್ನು ಕಟ್ಟಿಕೊಂಡೊಡನೆ ಅದು ಒಮ್ಮೆಲೆ ಪರಿಶುದ್ಧ ಅಂಗವಾಗಿ ಬಿಡುವುದಿಲ್ಲ. ಅದಕ್ಕೆ ಸಂಸ್ಕಾರ ಸಾಧನೆಗಳು ಬೇಕು. ಆಚಾರ–ವಿಚಾರ, ನಡೆ–ನುಡಿ, ಪೂಜೆ–ಪುರಸ್ಕಾರ, ರೀತಿ–ನೀತಿಗಳಲ್ಲಿ ಬದಲಾವಣೆಗಳು ಆಗಬೇಕು. ಅಂಗ ಇರುವವರೆಗೂ ಲಿಂಗಪೂಜೆ ನಡೆಯಬೇಕು. "ಅಂಗ ಉಳ್ಳನ್ನಬರ ಲಿಂಗಪೂಜೆಯು ಬೇಕು ಅಂಗವೆಂಬ ಹದಗೊಂಡ ಭೂಮಿಯ ಮೇಲೆ ಲಿಂಗವೆಂಬ ಸುಜ್ಞಾನ ಬೆಳೆಯನ್ನು ಬೆಳೆಯಲು ಸಾಧ್ಯವಾಗುತ್ತದೆ. ಆ ಬೆಳೆಯೇ ವಿಶ್ವಾಸವೆಂಬ ಭತ್ತ, ಅದನ್ನು ಉಂಡು ಸುಖಿಯಾಗಿ ಬಾಳು ಎನ್ನುತ್ತಾರೆ ಒಕ್ಕಲಿಗ ಮುದ್ದಣ್ಣ. ಅಂಗವು ಯೋಗ ಸಾಧನೆಗೆ ಸಾಧನ".[3]

ಶ್ರೀಗುರುಕಾರುಣ್ಯದ ಮುಖೇನ ಲಿಂಗವು ಸಾಧಕನ ಕರಸ್ಥಲಕ್ಕೆ ಬಿಜಂಗೈಯ್ಯುವುದು. ಆಗ ಸಾಧಕನಿಗೆ ಅದರೊಂದಿಗಿನ ನಿರಂತರ ಸಾಧನೆಯ ಫಲವಾಗಿ ಕಂಗಳ ಮೂಲಕ ಅಶ್ರುಜಲಬಿಂದುಗಳು ಹರಿಯದಿರ್ದಡೆ ಅದು ಲಿಂಗಪೂಜೆ ಎನಿಸದು. ನಾಲಿಗೆಯ ಮುಖೇನ ಪರಮನ ನಾಮಸ್ಮರಣೆ ಮಾಡುವಾಗ ಅಂಗಭಾವ ಅಳಿದಿರಬೇಕು ಇಲ್ಲವಾದಡೆ ಅದು ಲಿಂಗದ ನೆನಹೆನಿಸದು. ಲಿಂಗದ ಬಗ್ಗೆ ಸನ್ನುಡಿಗಳನ್ನು ಆಲಿಸುವಾಗ ಮನಮಗ್ನವಾಗಿ ಸರ್ವಾಂಗ ರೋಮಾಂಚಿತವಾಗಬೇಕು. ಇಂಥಹ ಲಕ್ಷಣಗಳನ್ನು ಲಿಂಗ ಪೂಜೆ ಮಾಡುವುದರಿಂದ ಸಾಧಕನು ಅನುಭವಿಸದಿದ್ದಡೆ ಅಂಥಹ ಲಿಂಗದ ನೆನಹನ್ನು ಮಾಡುವುದೇ ವ್ಯರ್ಥ.

**ಕಾಯ:**

ಯೋಗದ ಸಾಧನೆಗೇ ಕಾಯವೇ ಸಾಧನವಾಗಿದೆ. 'ಶರೀರಮಾದ್ಯಂ ಖಲು ಧರ್ಮಸಾಧನಂ' ಎಂಬ ಉಕ್ತಿಯಂತೆ ಕಾಯವೆಂಬ ಸಾಧನವಿಲ್ಲದೇ ಯೋಗ ಸಾಧನೆ ಸಾಧ್ಯವಿಲ್ಲ. ಕಾಯಕ್ಕೆ ದೇಹ, ಘಟ, ಅಂಗ ಎಂಬ ನಾನಾ ಅರ್ಥಗಳಿವೆ. ಕಾಯದಲ್ಲಿ ಆತ್ಮ ಚೈತನ್ಯವಿದೆ. ಈ ಕಾಯದಲ್ಲಿ ಅನೇಕ ಸಕ್ರಿಯಾತ್ಮಕ ಚಟುವಟಿಕೆಗಳು ಭಾಗವಹಿಸುತ್ತಲೇ ಇರುತ್ತವೆ. ಯೋಗಕ್ಕೆ ಕಾಯದ ಶುದ್ಧೀಕರಣ ಬಹಳ ಮುಖ್ಯ. ಈ ಕಾಯವನ್ನು ಶುದ್ಧೀಕರಣ ಮಾಡಲು ವಚನಗಳೇ ಆಧಾರ. ವಚನಗಳಲ್ಲಿ ಕಾಯದ ಮುಖೇನ ಯೋಗ

ಸಾಧನೆಗೆ ಪೂರಕವಾದ ಎಲ್ಲಾ ಯೋಗ ಸೂತ್ರಗಳಿವೆ. ಕಾಯದ ಅಂಗ ಗುಣಗಳನ್ನು ಕಳೆದುಕೊಂಡು, ಲಿಂಗಮಯವನ್ನಾಗಿ ಮಾಡಿಕೊಂಡರೆ ಯೋಗದ ಸಾಧನೆಗೆ ಸಹಾಯಕ.

ಕಾಯವಿಡಿಹನ್ನಕ್ಕರ ಕಾಮವೆ ಮೂಲ;
ಜೀವವಿಡಿಹನ್ನಕ್ಕರ ಕ್ರೋಧವೆ ಮೂಲ;
ವ್ಯಾಪ್ತಿಯುಳ್ಳನ್ನಕ್ಕರ ಸಕಲ ವಿಷಯಕ್ಕೆ ಆಸೆಯೆ ಮೂಲ.
ಎನ್ನ ಆಸೆ ಘಾಸಿಮಾಡುತ್ತಿದೆ.
**ಶಿವಯೋಗದ** ಲೇಸಿನ ಠಾವ ತೋರು, ಕಪಿಲಸಿದ್ಧಮಲ್ಲಿಕಾರ್ಜುನಾ.

**– ಸಿದ್ಧರಾಮೇಶ್ವರ**

**ಸಮಗ್ರ ವಚನ ಸಂಪುಟ: ೪ ವಚನದ ಸಂಖ್ಯೆ: ೧೩೭೮**

ಅಂಗ–ಮನ–ಪ್ರಾಣಗಳ ವಿಕಾರಗಳಿಗೆ ಕಾಮಕ್ರೋಧ ಲೋಭಗಳೇ ಬೇರು. ಮನ, ಬುದ್ಧಿ ಇವು ಮಾನವನಿಗೆ ದೇವನಿತ್ತ ದಿವ್ಯ ಕಾಣಿಕೆಗಳು. ದೇಹ ಪರಮನಿಂದ ಬಂದಿದೆ. ಪರಮನಿಗೆ ಸಲ್ಲಬೇಕು. ಕೂಡಲ ಸಂಗನ ಒಲಿಸಲು ಬಂದ ಪ್ರಸಾದ ಕಾಯವ ಕೆಡಿಸಲಾಗದು.  ಬಾಹ್ಯದ ಲೌಕಿಕ ಪ್ರಪಂಚದಲ್ಲಿಯ ಆಸೆ ಮನವನ್ನು ಘಾಸಿಗೊಳಿಸುತ್ತದೆ. ಕಾಯ ಜೀವಕ್ಕೆ ತೊಡಕಾದ ಮಾಯೆಯನ್ನು ನಿವಾರಿಸಿ ಮನವನ್ನು ಲಿಂಗಮನವನ್ನಾಗಿಸಿದರೆ ಕಾಯವು ಪ್ರಸಾದಕಾಯವಾಗುತ್ತದೆ.  ಶಿವಯೋಗದ ಅರಿವಿನ ಮಾರ್ಗವಾದ ಯೋಗದ ನಿಲುವನ್ನು ತೋರಿರಿ ಎಂಬ ದೈನ್ಯತೆಯ ಭಾವ ವ್ಯಕ್ತವಾಗಿದೆ.

ಕಾಯದ ಗುಣವನರಿಯದೆ ಕರ್ಮಯೋಗವ ಮಾಡಬಹುದೆ?
.....................................................
ಇದು ಲಿಂಗ ಒಡಗೂಡಿದ ಕ್ರಿಯಾಪಥಯೋಗ.
ಶಂಭುವಿನಿಂದಿತ್ತ ಸ್ವಯಂಭವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು.

**–ದಾಸೋಹದ ಸಂಗಣ್ಣ**

**ಸಮಗ್ರ ವಚನ ಸಂಪುಟ: ೭ ವಚನದ ಸಂಖ್ಯೆ: ೧೧೮೯**

ಕರ್ಮ ಎಂದರೆ ಕಾಯಕ ಕ್ರಿಯೆ. ಬೇಕು–ಬೇಡಗಳನ್ನರಿತು ಸರಿಯಾದ ಕ್ರಿಯೆಯನ್ನು ಮಾಡಬೇಕಲ್ಲದೆ ನಿರರ್ಥಕವಾದ ನಿಷ್ಕ್ರೀಯೆಯ ಕೆಲಸ ಮಾಡಬಾರದು, ಸತ್ಕ್ರಿಯೆಯಿಂದ ದೊರೆಯುವ ಪರಿಣಾಮವನ್ನರಿಯದೆ,

ಸ್ವಸ್ವರೂಪ, ಜ್ಞಾನವೆನಿಸುವ ಆತ್ಮಯೋಗವನ್ನು ಮಾಡಲಾಗದು. ಆತ್ಮಯೋಗದ ವಿಸ್ತಾರವನ್ನು ತಿಳಿಯದೆ, ಮೂಲದರಿವಿನ ಜ್ಞಾನವಾಗದು. ಅದರ ರಹಸ್ಯ ತಿಳಿಯದು. ಯಾವ ರೀತಿ ಮಣ್ಣಿನಲ್ಲಿ ನೀರಿನಂಶ ಅಧಿಕವಾಗಿ ಮಣ್ಣು ಕೆಸರಾಗುತ್ತದೆ. ಕೈಕೆಸರನ್ನು ಮತ್ತೆ ಸತ್ಕ್ರಿಯೆಯಿಂದ, ಕೆಸರನ್ನು ಮತ್ತೆ ನೀರಿಲ್ಲದೆ ತೊಳೆದರೆ, ಕೆಸರೇ ವಿನಹ: ಶುದ್ಧ ನೀರಾಗದು. ಸತ್ಕ್ರಿಯೆಯಿಂದ ಸತ್ಕರ್ಮ, ಇವುಗಳ ಮರ್ಮದಿಂದ ನಿಜದ ನೆಲೆಯು ಸೂಜಿಯಲ್ಲಿರುವ ಅತೀಸಣ್ಣ ರಂಧ್ರಗೊಳಗೆ ಪೋಣಿಸುವ ಶ್ರಮದಂತೆ ಕಷ್ಟಸಾಧ್ಯ. ಇದುವೇ ಅಂಗ–ಲಿಂಗವನೊಡಗೂಡಿದ ಕ್ರಿಯಾಪಥಯೋಗವು. ಯೋಗದ ಪ್ರಕ್ರಿಯೆಗೆ ಒಳಗೊಂಡು ಭಕ್ತಿ, ಜ್ಞಾನ, ಕ್ರಿಯಾಶಕ್ತಿಗಳು ಪುಟಗೊಂಡು ಪರಿಶುದ್ಧವಾದಾಗ ಸಾಧಕರಿಗೆ ಸುಚಿತ್ತ, ನಿರಹಂಕಾರ ಸುಮನ, ಸುಬುದ್ಧಿ, ಸುಜ್ಞಾನ, ಸದ್ಭಾವಗಳಾಗಿ ಪರಿವರ್ತನಗೊಳ್ಳುವುವು.

ಅಂಗತ್ರಯಗಳಾದ ತ್ಯಾಗಾಂಗ, ಭೋಗಾಂಗ, ಯೋಗಾಂಗಗಳು ಶಿವಯೋಗ ಸಾಧನೆಗೆ ಮಹತ್ವದ ಅಂಗಗಳು. ಅಂಗ ಗುಣಗಳನ್ನು ತ್ಯಾಗ ಮಾಡಿದ ಅಂಗವೇ ತ್ಯಾಗಾಂಗ, ನಂತರ ಬದುಕಿನ ಭೋಗಗಳನ್ನು ಲಿಂಗಾರ್ಪಿತದೊಂದಿಗೆ ಭೋಗಿಸುವುದೇ ಭೋಗಾಂಗ. ಮುಂದೆ ಸಾಧನೆಯಿಂದ ಲಿಂಗಾಂಗ ಸಾಮರಸ್ಯ ಹೊಂದಿದ ಅಂಗವೇ ಯೋಗಾಂಗ.

ತನುಗುಣವಳಿದಲ್ಲಿ ತ್ಯಾಗಾಂಗ
ಲಿಂಗದೊಡನೆ ಸಕಲಭೋಗಂಗಳ ಭೋಗಿಸುವಲ್ಲಿ ಭೋಗಾಂಗ
ನಿಜದಲ್ಲಿ ಬೆರೆಸಿದಲ್ಲಿ ಯೋಗಾಂಗ
ಇಚಿತೀ ತ್ರಿವಿಧದಲ್ಲಿಯ ಶಿವಯೋಗಾಂಗ
ಇದಲ್ಲದನ್ಯಯೋಗಂಗಳೆಲ್ಲಾ ವಿಯೋಗಂಗಳಯ್ಯಾ
ಸೌರಾಷ್ಟ್ರ ಸೋಮೇಶ್ವರಾ

**ಆದಯ್ಯ**

**ಸಮಗ್ರ ವಚನ ಸಂಪುಟ –೬ ವಚನದ ಸಂಖ್ಯೆ: ೯೪೭**

ಯೋಗ ಅಭ್ಯಾಸಿಗಳ ತನುವಿನಲ್ಲಿ ಏನನ್ನು ಕಂಡರೂ ಬೇಕೆಂಬ ಭಾವ, ಎಷ್ಟಿದ್ದರೂ ಸಾಲದೆಂಬ ಮನಸ್ಥಿತಿ. ಕೋಪ, ತಾಪ, ಆಸೆ ಇವುಗಳನ್ನು ತ್ಯಾಗಮಾಡಬೇಕು. ಗುರುಕಾರುಣ್ಯದಿಂದ ಪಡೆದ ಅಂಗವನ್ನು ನಿಷ್ಠೆಯಿಂದ ಪೂಜಿಸಬೇಕು. ಈ ನಡುವೆ ಜೀವನದಲ್ಲಿ ಎಂತಹ ಕಷ್ಟಗಳು ಬಂದರೂ, ಲಿಂಗಪ್ರಸಾದವೆಂದೇ ಸ್ವೀಕರಿಸಬೇಕು. ಎಲ್ಲವನ್ನು ಪರಮನಿಗೆ ಸಮರ್ಪಿಸಿ, ಕೂಡುವುದೇ ಯೋಗಾಂಗ. ತ್ಯಾಗಾಂಗ, ಭೋಗಾಂಗ

ಮತ್ತು ಯೋಗಾಂಗಗಳ ಸಮೀಕರಣವೇ ಶಿವಯೋಗಾಂಗವಾಗಿದೆ. ಉಳಿದ ಯೋಗಗಳೆಲ್ಲವೂ ವಿಯೋಗವೆಂದು ತಿಳಿಸುತ್ತಿದ್ದಾರೆ.

ತ್ಯಾಗಾಂಗವಾಗಿ ಕೊಡುತ್ತಿದ್ದಲ್ಲಿ
ಭೋಗಾಂಗನಾಗಿ ಸುಖಿಸುತ್ತಿದ್ದಲ್ಲಿ
ಯೋಗಾಂಗನಾಗಿ ವಾಯುದ್ವಾರ ಭೇದಂಗಳನರಿತು
. . . . . . . . . . . . . . . . . . . . . . .
ಬ್ರಹ್ಮೇಶ್ವರಲಿಂಗವೆಂಬ ವಸ್ತುವ ಕೂಡುವ ದೃಷ್ಟ.

**–ಬಾಹೂರ ಬೊಮ್ಮಣ್ಣ**

**ಸಮಗ್ರ ವಚನ ಸಂಪುಟ –೮, ವಚನದ ಸಂಖ್ಯೆ: ೨೭೨**

ನೋಡುವ ಕಣ್ಣು, ನುಡಿವ ಬಾಯಿ, ಕೇಳುವ ಕಿವಿ, ಮೂಸಿಸುವ ನಾಸಿಕ, ಹಿಡಿವ ಹಸ್ತ, ನಡೆವ ಕಾಲು, ನೆನೆವ ಮನ, ಅರಿವ ಚಿತ್ತ, ಎಲ್ಲದರಲ್ಲೂ ತಲೆಹಾಕುವ ಅಹಂಕಾರ. ಅಹಂಕಾರವು ಭೋಗಾಂಗದ ಬೀಜ. ಗುಣತ್ರಯಾತ್ಮಕ ಪ್ರಕೃತಿಯ ಒಂದು ಗುಣ; ಒಂದು ಅಂತಕರಣ, ಸೂಕ್ಷ್ಮಾಂಗದ ಒಂದು ವಿಕಾರ. ಸಂಸಾರಾಂಕುರ ಬೀಜ. ಪರಮಾತ್ಮನಿಂದ ಜೀವಾತ್ಮನನ್ನು ಬೇರ್ಪಡಿಸುವ ಕರಣ, ಚೂರ್ಣರೂಪ. ರೂಪಾಶ್ರಯ. ಹಾಗಾಗಿ ಇಂದ್ರಿಯಗಳಲ್ಲಿ ಲಿಂಗಗಳನ್ನು ಪ್ರತಿಷ್ಠಾಪಿಸಿ ಅಂಗದಲ್ಲಿ ನಿಷ್ಪತ್ತಿಗೊಳ್ಳುವ ಅವಕಾಶ ಮಾಡಿಕೊಟ್ಟುದೇ ಷಟ್‌ಸ್ಥಲ ಮಾರ್ಗ. ಭತ್ತವನ್ನು ಸಂಸ್ಕಾರಗೊಳಿಸಿದಾಗ ಅಕ್ಕಿಯಾಗುತ್ತದೆ. ಅತಿ ಸಾಮಾನ್ಯವಾದ ಒಂದು ಅನ್ನ ಇಷ್ಟು ಸಂಸ್ಕರಣೆಗೊಳಪಡಬೇಕಾದರೆ 'ಶಿವಯೋಗ ಸಾಧಿಸಲು ಈ ಚಿತ್ತವೃತ್ತಿಗೆ ಎಷ್ಟೊಂದು ಸಂಸ್ಕಾರಬೇಕು' ಈ ದೇಹದ ಒಳಗೆ ಹೊರಗೆ ಎಲ್ಲೆಲ್ಲಿಯೂ ಸ್ವಲ್ಪ ಕೂಡಾ ಕುಂದಿಲ್ಲದೇ, ಕೇಡಿಲ್ಲದೇ, ಕೆಸರಿಲ್ಲದೇ, ನ್ಯೂನ್ಯತೆಯಿಲ್ಲದೆ, ಅತ್ಯಂತ ಪರಿಶುದ್ಧ, ಪವಿತ್ರ ನಿರ್ಮಲವಾದ ತನುತ್ರಯಗಳ ಪರಿಪಕ್ವಸ್ಥಿತಿ ಲಿಂಗಾಂಗ ಸಮರಸ ಸುಖಕ್ಕೆ ಸಿದ್ಧಗೊಳ್ಳುತ್ತದೆ. ಅದೇ ಶಿವಯೋಗ.

**ಮನಸ್ಸು:**

ಮನವೆಂದರೆ ಅದು ಮಹಾದೇವನ ಅರಿವಿನ ಭಂಡಾರ. ಸಂಕಲ್ಪ ವಿಕಲ್ಪಗಳೆ ಮನದ ಮೂಲ ಲಕ್ಷಣ.

*ಕ್ರಿಸ್ತು ಜಯಂತಿ ಕನ್ನಡ ಸಂಶೋಧನಾ ಪತ್ರಿಕೆ*
(Kristu Jayanti Kannada Sanshodhana Patrike)
*ಸಂಪುಟ 1, ಸಂಚಿಕೆ 1, ಮಾರ್ಚ್ 2022, ಪುಟಗಳು 61–73*

ಅಷ್ಟದಳ ಕಮಲವ ಸುತ್ತುವ ಜೀವಾತ್ಮನ
ಮೆಟ್ಟಿದ ದಳವನರಿಯದೆ,
ಆನು ಭಕ್ತನೆಂತೆಂಬೆ ! ಆನು ಶರಣನೆಂತೆಂಬೆ !
ಆನು ಲಿಂಗೈಕ್ಯನೆಂತೆಂಬೆ ಕೂಡಲಸಂಗಮದೇವಾ
ಎನ್ನ ಮನವು ಸಮಾಧಾನವಾಗದನ್ನಕ್ಕ

**– ಬಸವಣ್ಣನವರು**

**ಸಮಗ್ರ ವಚನ ಸಂಪುಟ–೧, ವಚನದ ಸಂಖ್ಯೆ: ೪೭೬**

ಪರಮನಿಂದ ಸೃಜಿಸಲಾದ ಅದ್ಭುತ ಹಾಗೂ ಶ್ರೇಷ್ಠ ಮಾದರಿ ಈ ಮಾನವ. ಅಂತೆಯೇ ಈ ತನು ಒಂದು ಸುಂದರವಾದ ಕಮಲವಿದ್ದಂತೆ. ಕಮಲದ ಅತ್ಯಂತ ಸೂಕ್ಷ್ಮ ಭಾಗವಾದುದು ಮನ. ಅಬ್ಬಾ ಇದರ ಬಣ್ಣನೆ ಅತಿ ಭವ್ಯ. ಇದಕ್ಕೆ ಹನ್ನೆರಡು ದಳಗಳಿವೆ. ಅವುಗಳಲ್ಲಿ ನಾಲ್ಕು ದಳಗಳು ಊರ್ಧ್ವಮುಖವಾಗಿ ಪರಿಶುದ್ಧವಾಗಿವೆ. ಇನ್ನುಳಿದ ಎಂಟು ಅಧೋಮುಖವಾಗಿವೆ. ಅವುಗಳಾವುವೆಂದರೆ, ಇಂದ್ರದಳ, ಅಗ್ನಿದಳ, ಯಮದಳ, ನೈರುತ್ಯದಳ, ವರುಣದಳ, ವಾಯುದಳ, ಕುಬೇರದಳ ಮತ್ತು ಈಶಾನ್ಯದಳ. ಇದು ಅಂತರಂಗಕ್ಕೆ ಸಂಬಂಧಿಸಿದ್ದಾದರೆ, ಬಹಿರಂಗದಲ್ಲಿ ಎರಡು ಕಣ್ಣುಗಳು, ಎರಡು ಕಿವಿಗಳು, ಎರಡು ಮೂಗಿನ ಹೊಳ್ಳೆಗಳು, ಚರ್ಮ ಮತ್ತು ನಾಲಿಗೆ. ಇವು ತನುವನ್ನು ಹಿಡಿದು, ತನುವಿಗೆ ಸೌಂದರ್ಯವನ್ನು ತಂದು ಕೊಟ್ಟಿವೆ.

ಆದರೆ, ತನುವಿನಲ್ಲಿರುವ ಜೀವಾತ್ಮನನ್ನು ಈ ಎಂಟುದಳಗಳು ಆವರಣವಾಗಿ ಸುತ್ತುವರಿದು ನಿಂತಿದೆ. ಇವುಗಳನ್ನು ಮೆಟ್ಟಿ ನಿಲ್ಲಲಾಗದೆ ದಳಗಳ ಸಂಗ ಮಾಡಿ ಪ್ರಾಪಂಚಿಕ ಕ್ಷಣಿಕ ಜೀವನದಲ್ಲಿ ಮೈಮರೆತಿದ್ದಾನೆ. ಮೆಟ್ಟಿ ನಿಂತಿರುವ ರೀತಿ ಸರಿಯೇ ಅಥವಾ ತಪ್ಪೇ ಎಂಬ ಪ್ರಜ್ಞೆ ಅವನಿಗಿಲ್ಲ. ಈ ಸ್ಥಿತಿಯಲ್ಲಿ ಭಕ್ತನೆಂದು ಕರೆಯಲು ಸಾಧ್ಯವಿಲ್ಲ. ಎಲ್ಲಿಯತನಕ ಸತ್ಯದ ಅಸ್ತಿತ್ವದ ಬಗ್ಗೆ ಅವನಿಗರಿವಾಗುವುದಿಲ್ಲವೋ ಅಲ್ಲಿಯ ತನಕ ಯೋಗಿಯಾಗಲಾರ. ಅಂಗವನ್ನು ಆವರಿಸಿದ ಮನ ಅಂಗದಲ್ಲಿಯೇ ಇರುವ ಅಷ್ಟದಳ ಕಮಲಗಳನ್ನು ಮೆಟ್ಟಿ ನಿಲ್ಲುವ ಬದಲು ಅವುಗಳನ್ನು ಸುತ್ತುವರಿದು ಮನಮಗ್ನವಾಗಿದೆ. ಅಂತೆಯೇ ಮನಕ್ಕೆ ಸಮಾಧಾನವೆಂಬುದಿಲ್ಲವಾಗಿದೆ.

**ಕುಂಡಲಿನೀ ಶಕ್ತಿ:**

ಪ್ರತಿಯೊಬ್ಬರಲ್ಲಿಯೂ ಮಾನಸಿಕ ಶಕ್ತಿಗಳಿವೆ. ಹೆಚ್ಚಿನವರು ಇವುಗಳನ್ನು ಇಂದ್ರಿಯ ಭೋಗಕ್ಕಾಗಿ ಮತ್ತು ಪ್ರಾಪಂಚಿಕ ಯಶಸ್ಸಿಗಾಗಿ ಬಳಸುವರು. ಈ ವ್ಯರ್ಥವಾಗುತ್ತಿರುವ ಶಕ್ತಿಯನ್ನೆಲ್ಲ ಸಂಗ್ರಹಿಸಿದರೆ ನಮ್ಮೊಳಗೆ

ಅದ್ಭುತ ಶಕ್ತಿ ಸಂಚಯವಾಗುವುದು. ಈ ಶಕ್ತಿಯನ್ನು ಆಧ್ಯಾತ್ಮಿಕ ಮಾರ್ಗದಲ್ಲಿ ಹರಿಸಬೇಕು. ಇಲ್ಲವಾದರೆ, ನಮ್ಮ ಪ್ರಾಣಶಕ್ತಿ ಬೇರೆ ದಿಕ್ಕಿನಲ್ಲಿ ಹರಿದು ತುಚ್ಛ ಅತೀಂದ್ರಿಯ ಶಕ್ತಿಗಳನ್ನು ಪಡೆಯುತ್ತದೆ. ಅದೇ ಶಕ್ತಿಯನ್ನು ಊರ್ಧ್ವಮುಖವಾಗಿ ಹರಿಸಿದರೆ, ಬಹುದೂರದಲ್ಲಾಗುವುದನ್ನು ನೋಡುವುದು, ಕೇಳುವುದು, ಇತರರ ಮನಸ್ಸನ್ನು ಅರಿಯುವುದು, ದೂರಾಲೋಚನೆ ಮಾಡುವುದು ಹಾಗೂ ಸಕಾರಾತ್ಮಕ ಮನೋಭಾವದಿಂದ ಇರುವ ಕ್ಷಮತೆ ಸಾಧಕನಿಗೆ ಬರುವುದು. ಅದುವೇ ಕುಂಡಲಿನಿ ಶಕ್ತಿ.

**ಷಟ್‌ಚಕ್ರಗಳು:**

ಶರೀರತ್ರಯಗಳೆನಿಸುವ ಕಾರಣ, ಸೂಕ್ಷ್ಮ, ಸ್ಥೂಲ ಶರೀರಗಳಲ್ಲಿ ಸಂಧಿಸುವ ಅನೇಕ ಕೇಂದ್ರ ಬಿಂದುಗಳಿವೆ. ಇವೇ ಚಕ್ರಗಳು. ಬೆನ್ನೆಲುಬಿನಲ್ಲಿ ತಲೆಯಿಂದ ಬುಡದವರೆಗೆ ಅಲ್ಲಲ್ಲಿ ನೆಲೆಗೊಂಡಿರುವುವು. ಇದರ ಮೂಲಕ ಶಕ್ತಿಯು ಹರಿಯುವುದು. ಪ್ರವಹಿಸುವ ಶಕ್ತಿಯು ಚೈತನ್ಯದಿಂದ ಹೊರಹೊಮ್ಮಿದ್ದು, ಅದರ ಸ್ವರೂಪವೇ ಆಗಿದೆ. ಕಾರಣ ಶಕ್ತಿಯು ಹರಿಯುವ ಮಾಧ್ಯಮವು ಈ ಚಕ್ರಗಳಾಗಿರುವುದರಿಂದ ಶಕ್ತಿ ಕೇಂದ್ರಗಳಾಗಿ ಚಕ್ರಗಳನ್ನು ಜಂಕ್ಷನ್‌ಸ್ಥಾನಗಳೆಂದು ಕರೆಯಲಾಗಿದೆ. ಅಂತೆಯೇ, ಮಿದುಳಿನಲ್ಲಿ ಉಂಟಾದ ಚಲನೆಯು, ಮೊದಲು ಚಕ್ರಗಳಿಗೆ ಪ್ರವಹಿಸಿ, ಇವುಗಳ ದ್ವಾರ ಬೇರೆ ಬೇರೆ ಅವಯವಗಳಿಗೆ ಪಸರಿಸುತ್ತವೆ. ಹೀಗೆ ಅಣುಚಕ್ರವು ಮೂಲ ಪರವಸ್ತುವಿನ ಶಕ್ತಿಯನ್ನು ಎಲ್ಲಾ ಚಕ್ರಗಳಿಗೆ ಚೈತನ್ಯರೂಪದಲ್ಲಿ ತುಂಬಿ ಅದ್ಭುತವಾದ ಕ್ರಿಯೆಗೆ ಕಾರಣವಾಗಿದೆ. ಮಾನವನ ಲಲಾಟದಲ್ಲಿ ಆಜ್ಞಾಚಕ್ರವಿದ್ದು (ಭ್ರೂಮಧ್ಯ) ಅದು ಮಹಾಲಿಂಗ ಸ್ಥಾನ. ಮಿದುಳಿನ ಮುಂಭಾಗದಲ್ಲಿ ಅಂದರೆ ನೆತ್ತಿಯ ಮುಂಭಾಗದಲ್ಲಿ ಸಹಸ್ರಾರದಲ್ಲಿ ಬ್ರಹ್ಮಚಕ್ರ ಇದಕ್ಕೆ ನಿಃಕಲ ಲಿಂಗವೆಂಬ ಹೆಸರು. ನೆತ್ತಿಯ ಭಾಗ ಶಿಖಾಚಕ್ರವೆಂದು ಅದುವೆ ನಿಶ್ಶೂನ್ಯಲಿಂಗ. ಮಸ್ತಕದ ಹಿಂಭಾಗದಲ್ಲಿ ಪಶ್ಚಿಮ ಚಕ್ರ ಅದುವೆ ನಿರಂಜನ ಲಿಂಗ. ಈ ಲಿಂಗದ ಕೆಳಗೆ ಇರುವ ಅಣುಚಕ್ರವನ್ನು ಸಹಜಸ್ಥಲವೆಂದು ಕರೆಯುತ್ತಾರೆ. ಈ ಅಣುಚಕ್ರದಿಂದಲೇ ಮಿದುಳಿನಲ್ಲಿ ಚಲನೆಗಳು ಉಂಟಾಗುತ್ತದೆ. ಈ ಚಲನೆಯು ಸ್ನಾಯುಗಳ ಮೂಲಕವಾಗಿ ಶರೀರದಲ್ಲೆಲ್ಲಾ ಹರಡುತ್ತದೆ. ಹೀಗೆ ಪಸರಿಸುವಲ್ಲಿ ನರಗಳು ಅಥವಾ ನಾಡಿಗಳು ಸ್ನಾಯುಗಳೊಂದಿಗೆ ಮೊದಲು ಬೆನ್ನೆಲುಬಿನ ರಂಧ್ರದೊಳಗಿಂದ ಪ್ರವೇಶ ಮಾಡಿ, ಅಲ್ಲಿಂದ ಮೇಲ್ಕಂಡ ಚಕ್ರಗಳ ಮುಖೇನ ಶರೀರದಲ್ಲೆಲ್ಲಾ ಪಸರಿಸಿ, ಅಲ್ಲಿ ನಡೆಯುವ ಅನೇಕ ರೀತಿಯ ಕ್ರಿಯೆಗಳಿಗೆ ಕಾರಣೀಭೂತವಾಗುತ್ತದೆ. ಈ ರೀತಿಯಾಗಿ ಮೂಲ ಪರಬ್ರಹ್ಮ ಚೈತನ್ಯ ವಸ್ತು ಪಿಂಡಾಂಡದೊಳಗೂ ಚೈತನ್ಯ ಸ್ವರೂಪವಾಗಿ ನಿರಾಕಾರ ವಸ್ತುವೇ ಸಾಕಾರ ರೂಪದಲ್ಲಿ ಕಾಣುವ ಈ ದೇಹಕ್ಕೆ ಆಧಾರವಾಗಿದೆ".[4]

ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ

ವಿಶುದ್ಧ ಆಜ್ಞೆ ಎಂದೆಂಬರು
ಈ ಆರ ಬಲ್ಲಡೆ ನೀವು ಹೇಳಿರೇ.

. . . . . . . . . . . . . . . . .

– ಇಂತಪುದೀಗ ಶಿವಯೋಗ.
ಉಳಿದ ಅಭ್ಯಾಸಯೋಗಿಗಳ ಕಂಡು ನಗುತಿರ್ದೆನಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ.

**– ಸಿದ್ಧರಾಮೇಶ್ವರರು**

**ಸಮಗ್ರ ವಚನ ಸಂಪುಟ–೪, ವಚನದ ಸಂಖ್ಯೆ: ೧೭೧**

ಸಾಮಾನ್ಯವಾಗಿ ಯೋಗದಲ್ಲಿ ಅತಿ ಮುಖ್ಯವಾದವು ಆರು ಚಕ್ರಗಳು. ಅವು ಯಾವುವೆಂದರೆ ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ ಮತ್ತು ಆಜ್ಞಾಚಕ್ರಗಳು. ಇದು ಒಂದು ರೀತಿಯಾದರೆ, ಲಿಂಗಕ್ಕಾಧಾರ ಹಾಗೂ ಲಿಂಗಕ್ಕಾಶ್ರಯರೂಪನಪ್ಪ ಸದ್ಭಕ್ತನ ಕಾಯದ ಕರಸ್ಥಲವೇ ಆಧಾರಚಕ್ರ. ನಾದ ಮಂತ್ರ ಸ್ಥಾನಕ್ಕೆ ಅಧಿಷ್ಠಾನವಾಗಿರುವ ಸ್ವಾಧಿಷ್ಠಾನ ಚಕ್ರ, ತತ್ತ್ವದ ರೂಪದ ಬೆಳಗನ್ನು ಕಾಣುವ ಲಿಂಗಾಂಗಿಯ ಶಿರಸ್ಥಲವೇ ಮಣಿಪೂರಕ, ಬಹಿರಂಗದ ಹಾಗೂ ಬಾಹ್ಯ ವಸ್ತುಗಳಲ್ಲಿ ಆಸೆಯಿಲ್ಲದಿರುವುದೇ ಅನಾಹತ ಚಕ್ರವು. ಸಂಕಲ್ಪ ವಿಕಲ್ಪ, ಬೇಕುಬೇಡಗಳನ್ನು ತೊಡೆದಿರುವುದೇ ವಿಶುದ್ಧಿಚಕ್ರವು. ಸರ್ವ ಜೀವಿಗಳಲ್ಲಿ ದಯಾಪರತ್ವದಿಂದಿರುವುದೇ ಆಜ್ಞೆಯು. ಇವೇ ಲಿಂಗಧಾರಣ ಷಟ್ ಸ್ಥಾನಗಳೇ ಷಟ್ ಚಕ್ರಗಳು. ಆರು ಸ್ಥಲಗಳ ಮರ್ಮವನರಿತು, ಆರು ಸ್ಥಲಗಳಲ್ಲಿ ಲಿಂಗಸಾಧನೆಯನ್ನು ಮಾಡುವುದೇ ಸಾಧಕನ ಮೂಲ ಧ್ಯೇಯ. ಇದು ಶರಣರು ಕಂಡ ಶಿವಯೋಗ. ಉಳಿದ ಅಭ್ಯಾಸಗಳೆಲ್ಲವೂ ಶಿವಯೋಗ ಸಾಧನೆಯ ಮಾರ್ಗವಲ್ಲ.

**ಸಕೀಲಗಳು:**

"ವಚನಗಳಲ್ಲಿ ಸಕೀಲಗಳು ಮುಖ್ಯ ಭೂಮಿಕೆಯಲ್ಲಿರುವುದನ್ನು ಕಾಣುತ್ತೇವೆ. ವಚನಗಳಲ್ಲಿ ಸಕೀಲಗಳ ಮೂಲ ಅರ್ಥ, ಅನ್ವಯ, ಆಕಾಂಕ್ಷೆ ಸ್ವರೂಪಾರ್ಥ, ಸಂಬಂಧಾರ್ಥ, ನಿಶ್ಚಯಾರ್ಥಗಳಿಂದ ಅರಿದು ಆನಂದಿಸಿ ಸುಖಿಗಳಾದರು ಶರಣರು. ಸಕೀಲಗಳು ಇಷ್ಟಲಿಂಗ ರಹಸ್ಯವನ್ನು ಪರಿಚಯಿಸುವುದಾಗಿದೆ. ಸಕೀಲವೆಂದರೆ ರಹಸ್ಯವೆಂದರ್ಥ. ಅಂದರೆ ಕೀಲ, ಶಬ್ದ ಸಂಬಂಧ ಸೂಚಕವಾಗಿದ್ದು ಎರಡನ್ನು ಜೋಡಿಸುವಲ್ಲಿ ಇದರ ಪಾತ್ರ ವಿಶೇಷವಾಗಿದೆ. ಅಂಗ ಲಿಂಗ ಸಾಮರಸ್ಯವನ್ನು ಸುಲಭವಾಗಿ ಗೊತ್ತು

ಮಾಡಿಕೊಳ್ಳಲು ಸಕೀಲಗಳ ಅರಿವು ಬೇಕೇ ಬೇಕು. ಸ್ಥಲಗಳ ಸಂಬಂಧವನ್ನು ಯಾವುದರಿಂದ ತಿಳಿಯತಕ್ಕದ್ದೋ ಅದು ಸಕೀಲವೆನಿಸುವುದು".[5]

ಸಕೀಲಗಳು ಅನೇಕವಿವೆ. ಅವುಗಳ ಮೂಲಕ ಸಂಬಂಧವನ್ನು ಅರಿತುಕೊಂಡು ಆಚರಿಸಬೇಕು. ಹೇಗೆ ಎರಡು ವಸ್ತುಗಳನ್ನು ಕೂಡಿಸಲು ಒಂದು ಕೀಲವು ಸಹಾಯಕಾರಿಯೋ ಹಾಗೆ ಈ ಸಕೀಲಗಳು ಸ್ಥಲಗಳ ಸಂಬಂಧವನ್ನು ಅರಿಯಲು ಸಹಾಯಕಾರಿಗಳು. ಸಕೀಲಗಳು ಅನೇಕ ವಿಧವಾಗಿವೆ. ಅದರಲ್ಲಿ ಷಡ್ವಿಧ ಸಕೀಲಗಳು, ಅಷ್ಟವಿಧ ಸಕೀಲಗಳು, ೧೦೮ ವಿಧ ಸಕೀಲಗಳು, ೨೧೬ ಸಕೀಲಗಳು ಮಹತ್ವವಾದವುಗಳು. ಶರಣರ ದೃಷ್ಟಿಯಲ್ಲಿ ಸಕೀಲಗಳ ಅರಿವು, ಯೋಗ ಜೀವನದ ಅಂತರ್ ಪ್ರಯಾಣಕ್ಕೆ ದಾರಿ ದೀಪವಾಗಿದೆ.

ವಚನಕಾರರ ಜೀವನದ ಯೋಗ ಕ್ರಾಂತಿ ವೈಚಾರಿಕ ಸಾಹಿತ್ಯದಲ್ಲಿ ಮೌಲ್ಯ ವಿವೇಚನೆ ಮತ್ತು ಅವುಗಳ ದಿಟ್ಟ ಆಚರಣೆ, ಅನುಭವದ ಮಾಧ್ಯಮವನ್ನು ಭಾಷೆಯನ್ನು ಬಳಸಿಕೊಂಡ ರೀತಿ. ಅವರದು ಭಾವದ ಭಾಷೆ. ಭಾವದ ಚಿಂತನಶೀಲತೆಯಿಂದ ಪರಿಪಾಕಗೊಂಡುದರ ಫಲ. ಇಂದಿಗೆ ಅಳವಡಿಸಿ ಮುಂದೆ ಮಾರ್ಗದರ್ಶಕವಾಗಿಸುವ ಅಂತರ್ದೃಷ್ಟಿ ವಚನ ಸಾಹಿತ್ಯದ ಜೀವಂತಿಕೆಯ ಪ್ರಮುಖ ಲಕ್ಷಣ. ಭಾಷಾ ಮಾಧ್ಯಮ ಸ್ವತಂತ್ರ ವಿಚಾರಶೀಲತೆಯ ಫಲ. ಅನುಭವದ ಬೆಳಕನ್ನು ಭಾಷೆಯಲ್ಲಿ ಮೂಡಿಸುವ ವಿಶಿಷ್ಟ ಮಾಧ್ಯಮ ವಚನಗಳು. ಭಾವನೆಗಳ ಅಭಿವ್ಯಕ್ತಿಗೆ ಭಾಷೆಯನ್ನು ಬಳಸುವ ರೀತಿ ಒಂದು ಹೊಸ ಮನ್ವಂತರವನ್ನೇ ವಚನ ಸಾಹಿತ್ಯ ಸೃಷ್ಟಿಸಿತು. ಅಂತರಂಗಿಕ ತಳಮಳವನ್ನು ಯೋಗ ಸಾಧನೆಯ ವಿವಿಧ ಹಂತಗಳನ್ನು, ಅನುಭಾವ ನಿಲವನ್ನೂ ಮಾತಿನಲ್ಲಿ ಮೂಡಿಸುವ ಶಕ್ತಿಯನ್ನು ಕನ್ನಡಕ್ಕೆ ತಂದುಕೊಟ್ಟಿದೆ.

---

***ಆಕರ ಗ್ರಂಥಗಳು:***

೧. ಶ್ರೀಜಚನಿ ಸಾಹಿತ್ಯ: ಶರಣ –ಶರಣೆಯರು, ಸಂಪಾದಕರು, ಡಾ. ವೀರಣ್ಣ ರಾಜೂರ, ಪುಟ ಸಂಖ್ಯೆ: ೮೧೪.

೨. ವಿಶ್ವಧರ್ಮ ದರ್ಶನ ಸಂಪುಟ–೧, ಪ್ರಧಾನ ಸಂಪಾದಕ: ಪ್ರಭುಶಂಕರ, ಆದಿಗುರು ಶ್ರೀ ಶಿವರಾತ್ರೀಶ್ವರ ಗ್ರಂಥ ಮಾಲೆ, ಮೈಸೂರು, ಪುಟ ಸಂಖ್ಯೆ: ೧೪೨

೩. ವಿಷಯ ವಚನ ಸಂಪುಟಗಳು, ಸಂಪುಟ–೧, ಅಂಗ, ಅನುಭಾವ, ಅರಿವು, ಸಂಪಾದಕರು: ಡಾ. ಸಂಗಮೇಶ ಸವದತ್ತಿಮಠ, ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠ, ಸುಕ್ಷೇತ್ರ ಹಾರಕೂಡ, ಬೀದರ ಜಿಲ್ಲೆ, ಪುಟ ಸಂಖ್ಯೆ: ೮–೧೨

೪. ಧ್ಯಾನ ಮತ್ತು ಆಧ್ಯಾತ್ಮಿಕ ಜೀವನ, ಸ್ವಾಮಿ ಯತೀಶ್ವರಾನಂದ, ಪ್ರಕಾಶಕರು: ರಾಮಕೃಷ್ಣ ಮಠ, ಬಸವನ ಗುಡಿ, ಬೆಂಗಳೂರು, ಪುಟ ಸಂಖ್ಯೆ: ೪೪೬–೪೪೮

೫. ಶತ ಏಕದ ನೆಲೆಮನೆ, (ಷಟ್ಥಲ ಜೀವನ ಮಾರ್ಗ) ಭಾರತೀ ಎಂ. ಕೆಂಪಯ್ಯ, ಪ್ರಕಾಶಕರು: ಬಸವ ಸಮಿತಿ, ಬಸವ ಭವನ, ಶ್ರೀ ಬಸವೇಶ್ವರ ವೃತ್ತ, ಬೆಂಗಳೂರು ೫೬೦೦೦೧. ಪುಟ ಸಂಖ್ಯೆ: ౭೨

***ಪರಾಮರ್ಶನ ಗ್ರಂಥಗಳು***

೧. ವಿಷಯ ವಚನ ಸಂಪುಟಗಳು, ಸಂಪುಟ–೧, ಅಂಗ, ಅನುಭಾವ, ಅರಿವು, ಸಂಪಾದಕರು: ಡಾ. ಸಂಗಮೇಶ ಸವದತ್ತಿಮಠ, ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮ್ಮಠ, ಸುಕೇತ್ರ ಹಾರಕೂಡ, ಬೀದರ ಜಿಲ್ಲೆ.

೨. ಧ್ಯಾನ ಮತ್ತು ಆಧ್ಯಾತ್ಮಿಕ ಜೀವನ, ಸ್ವಾಮಿ ಯತೀಶ್ವರಾನಂದ, ಪ್ರಕಾಶಕರು: ರಾಮಕೃಷ್ಣ ಮಠ, ಬಸವನಗುಡಿ, ಬೆಂಗಳೂರು.

೩. ಕರಣ ಹಸಿಗೆ, ಸಂಪಾದಕರು ಪೂಜ್ಯ ಚೆನ್ನಬಸವ ಶಿವಯೋಗಿಗಳು, ಪ್ರಭುದೇವರ ಲಿಂಗಜ್ಞಾನ ಸಾಹಿತ್ಯಮಾಲೆ, ಬಸವತತ್ವ ಪ್ರಚಾರ ಕೇಂದ್ರ, ವಿರಕ್ತಮಠ, ಪಾಂಡೋಮಟ್ಟಿ, ಚನ್ನಗಿರಿ ತಾಲ್ಲೂಕು.

೪. ಧ್ಯಾನ ಮತ್ತು ಆಧ್ಯಾತ್ಮಿಕ ಜೀವನ, ಸ್ವಾಮಿ ಯತೀಶ್ವರಾನಂದ, ಪ್ರಕಾಶಕರು: ರಾಮಕೃಷ್ಣ ಮಠ, ಬಸವನಗುಡಿ, ಬೆಂಗಳೂರು.

೫. ವಚನ ಜ್ಞಾನ–ವಿಜ್ಞಾನ, (ವಚನಗಳಲ್ಲಿ ವೈಜ್ಞಾನಿಕ ದೃಷ್ಟಿಕೋನ), ರುದ್ರೇಶ ಗಂಗಾಧರ ಕಿತ್ತೂರ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು.

೬. ಶತ ಏಕದ ನೆಲೆಮನೆ, (ಷಟ್ಸ್ಥಲ ಜೀವನ ಮಾರ್ಗ), ಭಾರತೀ ಎಂ. ಕೆಂಪಯ್ಯ, ಪ್ರಕಾಶಕರು: ಬಸವ ಸಮಿತಿ ಬಸವ ಭವನ, ಶ್ರೀ ಬಸವೇಶ್ವರ ವೃತ್ತ, ಬೆಂಗಳೂರು ೫೬೦೦೦೧.

೭. ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯ, ಸಂಪುಟ–೬, ಸಂಪಾದಕರು: ಡಾ. ವೀರಣ್ಣ ರಾಜೂರ, ಧಾರವಾಡ. ವಚನ ಪಿತಾಮಹ ಡಾ. ಫ. ಗು. ಹಳಕಟ್ಟಿ ಸಂಶೋಧನ ಕೇಂದ್ರ. ಬಿ. ಎಲ್.ಡಿ.ಇ.ಸಂಸ್ಥೆ, ವಿಜಾಪುರ.